ಕಾಡಿಗೆ ಕಣ್ಣು

**ಕಲೀಮ್ ಉಲ್ಲಾ**



# ಜಿಮ್ ಕಾರ್ಬೆಟ್ ಕಾಡಿನ ಹುಲಿಗಳ ಜಾಡು ಹಿಡಿದು

> ಶಿಕಾರಿ ಮತ್ತು ಫೋಟೋಗ್ರಫಿಯ ನಡವಳಿಕೆಗಳೆರಡೂ ಒಂದೇ ಮಾದರಿಯವು. ವ್ಯತ್ಯಾಸ ಎಂದರೆ ಶಿಕಾರಿ ಕೊಲ್ಲುವ, ಮೆಲ್ಲುವ ಮನಸ್ಥಿತಿಯಾದರೆ; ಛಾಯಾಗ್ರಹಣ ಸೆರೆ ಹಿಡಿಯುವ, ಸೊಬಗು ಆಸ್ವಾದಿಸುವ ಖುಷಿಯ ಮನೋಭಾವ. ಚಿತ್ರಿಸಿದ ಚಿತ್ರವ ಎಲ್ಲರಿಗೂ ತೋರಿಸಿ ನಲಿದಾಡುವ ಅವಕಾಶ.

ಉತ್ತರ ಭಾರತದ ಹುಲಿಗಳ ಬೇಟೆಗೆ ಹೊರಟಿದ್ದೆವು. ಇದಕ್ಕಾಗಿ ನಡೆಸಿದ ತಯಾರಿ ಬರೋಬ್ಬರಿ ಒಂದು ತಿಂಗಳಿನದು. ಹೊರಟ ಗೆಳೆಯರು ದಿನದಿನವೂ ನಾವು ಅಲ್ಲಿ ಪಾಲಿಸಬೇಕಾದ ರೀತಿ, ನೀತಿಗಳ ಬಗ್ಗೆ ಫೋನಿನಲ್ಲೇ ಮಾರುದ್ದದ ಭಾಷಣ ಕೊರೆಯುತ್ತಿದ್ದರು. ಸಾಕಷ್ಟು ತಿರುವು ಮುರುವುಗಳಿರುವ ರಸ್ತೆಗಳು; ಬೀಳುವ ಹಿಮಪಾತದ ಜೊತೆಗಿನ ಚಳಿಗಾಳಿ ಎಲ್ಲವೂ ಕಷ್ಟ ಎನ್ನುತ್ತಿದ್ದರು. ಒಟ್ಟಾರೆ ನಮ್ಮ ಪ್ರವಾಸ ಬಲುಪ್ರಯಾಸದ್ದೆಂದೂ, ಹೊಸ ಕಲಿಕೆ, ಹೊಸ ಸಾಹಸಗಳ ಮಹಾಪೂರವೇ ಅಲ್ಲಿ ಜರುಗಲಿದೆಯೆಂದು ಭವಿಷ್ಯವಾಣಿ ನುಡಿಯುತ್ತಿದ್ದರು. ಹಿಮಾಲಯದ ಟ್ರಕ್ಕಿಂಗ್ ಮಾಡಿ ಬಂದ ನನಗೆ ಇದೆಲ್ಲ ಹೊಸದಲ್ಲ ಎಂದು ಅವರಿಗೆ ಹೇಳುತ್ತಿದ್ದೆನಾದರೂ ನನಗೂ ಸಣ್ಣ ಹೆದರಿಕೆಯಿತ್ತು. ನಾವು ಹೀಗೆ ಹೋಗುವ ವಿಷಯವನ್ನು ಸಿಕ್ಕವರಿಗೆಲ್ಲಾ ಹೇಳಿ ಟಾಂಟಾಂ ಮಾಡಿ ಸಾಕಷ್ಟು ಪ್ರಚಾರವನ್ನೂ ಗಿಟ್ಟಿಸಿದ್ದೆವು. ನಮ್ಮಗಳ ಬರಪೂರ ತಯಾರಿ ನೋಡಿದ ಗೆಳೆಯರು "ಈ ಬಡ್ಡೀಮಕ್ಳು ಇನ್ನೆಂದೂ ಊರ ಕಡೆ ಮರಳಿ ಬರುವುದೇ ಇಲ್ಲವೇನೋ" ಎಂದು ಗೊಣಗಾಡುವಷ್ಟು ನಮ್ಮ ಸಿದ್ಧತೆ ನಡೆದಿತ್ತು.

ನಮ್ಮ ಮೊದಲ ಗುರಿ ಐನೂರ ಇಪ್ಪತ್ತು ಚದರ ಕಿ.ಮೀ. ಉದ್ದವಿರುವ ಜಿಮ್ ಕಾರ್ಬೆಟ್ ರಾಷ್ಟ್ರೀಯ ಉದ್ಯಾನವನವಾಗಿತ್ತು. ಎತ್ತರದ ಬೆಟ್ಟಗಳು, ಜಿನುಗು ಹಳ್ಳದ ತೊರೆಗಳು, ಜೌಗು ಹೊಂಡಗಳು, ವಿಶಾಲ ಹುಲ್ಲುಗಾವಲುಗಳ ಜತೆಗೆ ದೊಡ್ಡ ಸರೋವರವನ್ನು ಒಳಗೊಂಡ ಈ ಸ್ಥಳ ಮೋಡಿ ಮಾಡುವಂತದ್ದು. ಸದಾ ಮಂಜಿನ ಪರದೆ ಹೊರುವ ಇಲ್ಲಿನ ವಿಭಿನ್ನ ನೈಸರ್ಗಿಕ ಹಿನ್ನೆಲೆಯಲ್ಲಿ ಹುಲಿಗಳ ಪಟ ತೆಗೆಯುವ ಕುತೂಹಲ ತುಸು ಹೆಚ್ಚೇ ಇತ್ತು. ಅದೇನೋ ಕಬಿನಿ ಮತ್ತು ಬಂಡೀಪುರ, ಭದ್ರಾದಲ್ಲಿ ಹುಲಿಗಳ ಚಿತ್ರ ತೆಗೆದರೂ ನಮ್ಮ ದುರಾಸೆ ಮುಗಿದಿರಲಿಲ್ಲ.

ರಾಮಗಂಗಾ ನದಿಯ ಉದ್ದಕ್ಕೂ ಹರಡಿರುವ ಇಲ್ಲಿನ ಅಬೇಧ್ಯ ಕಾಡೇ ಒಂದು ವಿಶಿಷ್ಟ್ಯ ಜಾಗ. ಬಂಡೆಕಲ್ಲುಗಳ ನಡುವೆ ರಭಸವಾಗಿ ಹರಿಯುವ ರಾಮಗಂಗಾ ನದಿ ಮುಂದೆ ಜಲಾಶಯ ಸೇರುತ್ತದೆ. ಅದರ ಮಡಿಲಲ್ಲೇ ನಾವು ಉಳಿಯುವ ಜಾಗ ಇದ್ದದ್ದು. ಇಲ್ಲಿರುವ ಬಂಗಾಲಿ ಟೈಗರ್‌ಗಳಷ್ಟೇ ಎತ್ತರದ ಆನೆಗಳೂ ಕೂಡ ಫೋಟೋಗ್ರಫಿ ಮಾಡುವ ಜನರಿಗೆ ಇಷ್ಟವಾಗುತ್ತವೆ. ಇಲ್ಲಿಗೆ ಹೋಗುವವರು ಹಲವು ತಿಂಗಳ ಮೊದಲೇ ಯೋಜಿಸಿ ಬುಕ್ ಮಾಡಿಕೊಳ್ಳಬೇಕು. ಪ್ರವೇಶದ ಅವಕಾಶ ನಿಯಂತ್ರಿತವಾಗಿರುವ ಕಾರಣ ಬೇಡಿಕೆ ಹೆಚ್ಚು. ಜತೆಗೆ ಎರಡು